# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 708/2025**

**PW1**

| | | |
|---|---|---|
| ಸಾಕ್ಷಿಯ ಹೆಸರು | ಃ | ಜಗನ್ನಾಥ ಪೂಜಾರಿ |
| ತಂದೆ ಹೆಸರು | ಃ | ಸಿದ್ದು ಪೂಜಾರಿ |
| ಪ್ರಾಯ | ಃ | 69 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ನಿಟ್ಟೆ ಕಾರ್ಕಳ |

ದಿನಾಂಕ **: 03.01.2026** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎನ್.ವಿ.ಪಿ. ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಅರ್ಜಿದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 1 ಎಂದು, ದೂರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ - 2 ಎಂದು, ಸ್ಥಳ ಮಹಜರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 3 ಎಂದು, ಕಚ್ಛಾ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 4 ಎಂದು, ಐಎಮ್‌ವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 5 ಎಂದು, ಕಲಂ 160 ರ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 6 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 7 ಎಂದು, ನನ್ನ ಆಧಾರ್ ಕಾರ್ಡನ್ನು ಮತ್ತು ಅದರ ನೋಟರೀಕೃತ ನಕಲನ್ನು ಹಾಜರುಪಡಿಸಿದ್ದೇನೆ. (ನೋಟರೀಕೃತ ನಕಲನ್ನು ಮೂಲಪ್ರತಿಯೊಂದಿಗೆ ಹೋಲಿಸಿ ನೋಡಿದ ನಂತರ ಮೂಲಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು). ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿಪಿ - 8 ಎಂದು, ಪೋಲೀಸರ ಮುಂದೆ ನಾನು ನೀಡಿರುವ ಹೇಳಿಕೆಯ ಪ್ರತಿಯ ದೃಢೀಕೃತ ನಕಲನ್ನು ನಿಪಿ - 9 ಎಂದು, ಆಸ್ಪತ್ರೆಯ ಉಲ್ಲೇಖಾನಾ ಪತ್ರವನ್ನು ನಿಪಿ - 10 ಎಂದು, ಡಿಸ್ ಚಾರ್ಜ್ ಸಮ್ಮರಿಯನ್ನು ನಿಪಿ - 11 ಎಂದು, ಎರಡು ಹಣ ಪಾವತಿ ರಶೀದಿಗಳನು ಒಟ್ಟಾಗಿ ನಿಪಿ - 12 ಎಂದು, 9 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿ - 13 ಎಂದು, 8 ಔಷಧಿ ಚೀಟಿಗಳನ್ನು ಒಟ್ಟಾಗಿ ನಿಪಿ

- 14 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

<u>ಪಾಟೀ ಸವಾಲುಃ</u> ಶ್ರೀ ಪಿ.ಎ.ಎಸ್. 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ದ್ವಿಚಕ್ರ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಅದನ್ನು ಹಾಜರುಪಡಿಸಿರುವುದಿಲ್ಲ. ಅಪಘಾತವಾದ ಸಮಯದಲ್ಲಿ ಕಳೆದು ಹೋಗಿರುತ್ತದೆ. ಆರ್.ಟಿ.ಓ. ಯಿಂದ ಅದರ ಪ್ರತಿಯನ್ನು ಪಡೆದು ಹಾಜರುಪಡಿಸಬಹುದು. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನನಗೆ ಡಿಎಲ್ ಇಲ್ಲದ ಕಾರಣ ನಾನು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ವಯಸ್ಸಾದ ಕಾರಣ ಡಿಎಲ್ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಾಯವಾದ ಕಾರಣ ಬೈಕ್ ಚಲಾಯಿಸಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಕೈಕಾಲಿನಲ್ಲಿರುವ ಅಸಮರ್ಥತೆ ಹಾಗೂ ನಿಶ್ಯಕ್ತಿಯಿಂದ ನನಗೆ ವಾಹನ ಚಲಾಯಿಸಲು ಆಗದೆ, ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ಸ್ಥಳದಲ್ಲಿ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ರಸ್ತೆಯಲ್ಲಿ ತಿರುವು ಇದ್ದಾಗ ವಾಹನವನ್ನು ನಿಧಾನವಾಗಿ ಚಲಿಸಬೇಕು ಎಂದರೆ ಸರಿ. ನಾನು ವಾಹನವನ್ನು 20 ರಿಂದ 30 ಕಿಲೋ ಮೀಟರ ವೇಗದಲ್ಲಿ ಚಲಾಯಿಸುತ್ತಿದ್ದೆ. ನನ್ನದು ಗೇರು ಸಹಿತ ವಾಹನವಾಗಿರುತ್ತದೆ. ಅಪಘಾತವಾದ ಸಮಯದಲ್ಲಿ ನಾನು 4 ನೇ ಗೇರಿನಲ್ಲಿ ವಾಹನವನ್ನು ಚಲಾಯಿಸುತ್ತಿದ್ದೆ. 4 ನೇ ಗೇರಿನಲ್ಲಿ ವಾಹನವನ್ನು ಚಲಾಯಿಸುವಾಗ 45 ಕಿಲೋ ಮೀಟರ್ ವೇಗಕ್ಕಿಂತ ಕಡಿಮೆ ವೇಗದಲ್ಲಿ ವಾಹನವನ್ನು ಚಲಾಯಿಸಲು ಆಗುವುದಿಲ್ಲ ಎಂದರೆ ಸರಿ. ಆದ್ದರಿಂದ ನಾನು 20 ರಿಂದ 30 ಕಿಲೋ ವೀಟರ್ ವೇಗಳದಲ್ಲಿ ವಾಹನವನ್ನು ಚಲಾಯಿಸುತ್ತಿರಲಿಲ್ಲ ಮತ್ತು 40 ಕಿಲೋ ಮೀಟರ್ ಗೂ ಹೆಚ್ಚು ವೇಗದಲ್ಲಿ ವಾಹನವನ್ನು ಚಲಾಯಿಸುತಿತದ್ದೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳ ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. ಈಗ ಮುಂದುವರಿದು ಅದು ರಾಜ್ಯ ಹೆದ್ದಾರಿ ಎಂದು ನುಡಿಯುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಅಪಘಾತವಾದ ಸ್ಥಳವು ರಾಷ್ಟ್ರೀಯ ಅಥವಾ ರಾಜ್ಯ ಹೆದ್ದಾರಿ ಎಂದು ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ರಸ್ತೆ ಕಿರಿದಾದ ರಸ್ತೆಯಾಗಿದ್ದು, ರಾಜ್ಯ ಹೆದ್ದಾರಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳವು ಡಾಂಬಾರು ರಸ್ತೆ ಎಂದು ತಿಳಿಸಿದ್ದು, ಪಕ್ಕದಲ್ಲಿ 4 ಅಡಿ ಮಣ್ಣಿನ ರಸ್ತೆ ಇರುತ್ತದೆ. ಡಾಂಬಾರು ರಸ್ತೆಯ ಅಗಲ ಎಷ್ಟು ಎಂದು ನನಗೆ ತಿಳಿದಿಲ್ಲ. ಸದರಿ ರಸ್ತೆಯಲ್ಲಿ ಒಂದು ಘನ ವಾಹನ ಮಾತ್ರ

ಹೋಗಲು ಅವಕಾಶವಿದ್ದು, ನಾನು ನನ್ನ ದ್ವಿಚಕ್ರ ವಾಹವನ್ನು ರಸ್ತೆಯ ಪಕ್ಕದಲ್ಲಿ ಚಲಾಯಿಸಿದ್ದಲ್ಲಿ ಈ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಾನು ಯಾರು ಕರೆದರೂ ಅವರ ಬಳಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ನನಗೆ ಪ್ರಾಯವಾದ ಕಾರಣ ನಾನು  ಯಾವುದೇ ಕೂಲಿ ಕೆಲಸ ಮಾಡಲು ನನಗೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.  ಆದ್ದರಿಂದ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ತಕ್ಷಣ  ನನ್ನನ್ನು ಕಾರ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.  ಅಲ್ಲಿಂದ ನನ್ನನ್ನು ಅಂಬ್ಯುಲೆನ್ಸ್ ಮೂಲಕ ಮಣಿಪಾಲ ಆಸ್ಪತ್ರೆಗೆ ಕೆರದುಕೊಂಡು ಹೋಗಿರುತ್ತಾರೆ.  ಸದರಿ ಅಂಬ್ಯುಲೆನ್ಸ್ ಸರಕಾರಿ ಅಂಬ್ಯುಲೆನ್ಸ್ ಆಗಿದ್ದು, ಯಾವುದೇ ಹಣ ಪಾವತಿಸುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ.  ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಳ್ಳಲು ಇದ್ದ ಪರಿಚಾರಕರ ಸಾಕ್ಷಿ ಮಾಡಿಸಬಹುದು.  ನಾನು ನನ್ನ ಅರ್ಜಿಯಲ್ಲಿ ಹೇಳಿರುವಷ್ಟು ಖರ್ಚು ನನಗೆ ಆಗಿರಲಿಲ್ಲ ಎಂದರೆ ಸರಿಯಲ್ಲ.  ನನಗೆ ಆಗಿರುವ ಖರ್ಚುಗಳಲ್ಲಿ ಸುಮಾರು 1 ಲಕ್ಷ ರೂಗಳಷ್ಟು ಹಣವನ್ನು ನಾನು ಇ.ಎಸ್.ಐ. ಮೂಲಕ ಪಡೆದುಕೊಂಡಿದ್ದೇನೆ.

ನಾನು ವಾಹನ ಬಾಡಿಗೆಗಾಗಲೀ, ಪೌಷ್ಟಿಕ ಆಹಾರಕ್ಕಾಗಲೀ, ಪರಿಚಾರಕರ ಭತ್ಯೆಗಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಭವಿಷ್ಯದ ಚಿಕಿತ್ಸೆಯ ಅಗತ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ನಾನು ವೈದ್ಯಕೀಯ ಚಿಕಿತ್ಸೆಗೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿರುವ ಕಾರಣ 2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಮೆಡಿಕಲ್ ಬಿಲ್ಲುಗಳನ್ನು ಇ.ಎಸ್.ಐ. ಮೂಲಕ ಪಡೆದುಕೊಂಡಿದ್ದು, ಈ ದಿನ ಹಾಜರುಪಡಿಸಿರುವ ಬಿಲ್ಲುಗಳನ್ನು ಮತ್ತು ದಾಖಲೆಗಳನ್ನು, ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.